# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ
# ನ್ಯಾಯಾಲಯ ಹೂವಿನಹಡಗಲಿ
# ಅಸಲು ದಾವೆ ನಂ : 34-2018

**ಪಿಡಬ್ಲೂ : 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ : 04-02-2019 ರಂದು ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : **ವಾದಿ ಪರ ಶ್ರೀ ಕೆ ಎಸ್ ವಕೀಲರಿಂದ** :

ನಾನು ಈ ದಾವೆಯಲ್ಲಿ ವಾದಿ ಆಗಿರುತ್ತೇನೆ. ನಾನು ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿರುವ ಸಂಗತಿಗಳಲ್ಲೆವೂ ಸತ್ಯವಾಗಿರುತ್ತವೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ.

ದಿ : 15-04-1957 ರ ನೊಂದಾಯಿತ ಕ್ರಯಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ತಿಗರಿ ಶಿವಪ್ಪ ಅವರು ನನ್ನ ತಂದೆಗೆ ದಾವಾಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ನಿಪಿ-1 ರಲ್ಲಿ ಮಾರಾಟಗಾರರ ಸಹಿಯನ್ನು ನಿಪಿ-1 (ಎ) ಎಂದು, ಅದಕ್ಕೆ ಸಾಕ್ಷಿದಾರರಾಗಿ ಇಬ್ಬರು ಸಹಿ ಮಾಡಿರುತ್ತಾರೆ ಅವರ ಸಹಿಗಳನ್ನು ನಿಪಿ-1 (ಬಿ) ಮತ್ತು ನಿಪಿ-1 (ಸಿ) ಎಂದು ಗುರ್ತಿಸಲಾಯಿತು. ಇಬ್ಬರು ಸಾಕ್ಷಿದಾರರು ಮೃತಪಟ್ಟಿರುತ್ತಾರೆ. ನಿಪಿ-1 ನ್ನು ಪತ್ರಬರಹಗಾರರಾದ ಮಂತ್ರಮೂರ್ತಿ ಅವರು ಬರೆದಿರುತ್ತಾರೆ ಅವರ ಸಹಿಯನ್ನು ನಿಪಿ-1 (ಡಿ) ಎಂದು ಗುರ್ತಿಸಲಾಯಿತು. ಉಪ ತಹಶೀಲ್ದಾರ ನಾಡಕಚೇರಿ ಇಟ್ಟಿಗಿ ಅವರು ಮಾಡಿದ ಆದೇಶದ ದೃಡಿಕೃತ ನಕಲನ್ನು ನಿಪಿ-2 ಎಂದು, ಸಹಾಯಕ ಆಯುಕ್ತರು ಹೊಸಪೇಟೆ ಇವರು ಮಾಡಿದ ಆದೇಶವನ್ನು ನಿಪಿ-3 ಎಂದು, ಗಣಕೀಕೃತ ಆರ್‌ಟಿಸಿ ಅನ್ನು ನಿಪಿ-4 ಎಂದು ಗುರ್ತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿದ್ದರಿಂದ ಅನುಮತಿ ಮೇರೆಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.

ಎಸ್ ಎಸ್ ಜೆ
ನಕಲು ಬೆರಳಚ್ಚುಗಾರರು.